ಕನ್ನಡ ಜನಾಂತರಂಗ 14-11-2014. Page! no 18

# 'ಗ್ರಾಮಗಳ ಸಬಲತೆಗೆ ಕೆರೆ ಅಭಿವೃದ್ಧಿ ಅಗತ್ಯ'

## ಕೇಂದ್ರ ಸಚಿವ ಅನಂತಕುಮಾರ

ಶಿರಸಿ ಬ್ಯೂರೋ ವರದಿ

ಶಿರಸಿ : 'ಕೆರೆಗಳ ಅಭಿವೃದ್ಧಿ ಮಾಡುವ ಮೂಲಕ ಗ್ರಾಮಗಳ ಸಬಲತೆ ಸಾಧ್ಯವಿದೆ' ಎಂದು ಕೇಂದ್ರ ಸಚಿವ ಅನಂತಕುಮಾರ ಹೇಳಿದರು.

ಅವರು ಗುರುವಾರ ಸ್ವರ್ಣವಲ್ಲಿಯಲ್ಲಿ ಸ್ವರ್ಣವಲ್ಲಿ ಮಠ, ವೃಕ್ಷಲಕ್ಷ ಆಂದೋಲನ, ಭಾರತೀಯ ವಿಜ್ಞಾನ ಸಂಸ್ಥೆ ಇತರ ಸಂಘಟನೆಗಳ ಆಶ್ರಯದಲ್ಲಿ ಆರಂಭಗೊಂಡ 3 ದಿನಗಳ ರಾಷ್ಟ್ರ ಮಟ್ಟದ ಕೆರೆ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಬೆಂಗಳೂರಲ್ಲಿ ಸಾಕಷ್ಟು ಕೆರೆಗಳು ಭೂಗಳ್ಳರ ಪಾಲಾಗಿದೆ. ಅಂತರ್ಜಲ, ಪರಿಸರದ ಶಕ್ತಿ ಹೆಚ್ಚಲು ಕೆರೆ ಸಂರಕ್ಷಣೆ ಪ್ರಧಾನ. ಕೆರೆ ಉಳಿಸಲು ಹಸಿರು ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ಆರೋಗ್ಯ ಸಮಸ್ಯೆಗೆ ಜೀವನಶೈಲಿ ಕಾರಣ. ಪ್ಲಾಸ್ಟಿಕ ಬಳಕೆ ಕಡಿಮೆ ಮಾಡಿ ಹಸಿರು ಭಾರತ ಮಾಡಬೇಕು' ಎಂದರು.

'ಬೇಡ್ತಿ ಯೋಜನೆ ತಡೆಗೆ ಶ್ರೀಗಳ ಹೋರಾಟ ಪ್ರಮುಖ ಕಾರಣ. ಇಂದು ಕೆರೆ ಸಂರಕ್ಷಣೆಗೆ ಮುಂದಾದ ಶ್ರೀಗಳ ಕಾರ್ಯಕ್ಕೆ ಸಂಪೂರ್ಣ ಬೆಂಬಲವಿದೆ. ನಿರ್ಣಯಗಳ ಸಮಗ್ರ ಮಾಹಿತಿ ತಂದರೆ ದೆಹಲಿಯಲ್ಲಿ ಪರಿಸರ, ಜಲಸಂಪನ್ಮೂಲ ಸಚಿವರ ಜತೆ ಚರ್ಚಿಸಿ ದೇಶದಲ್ಲಿ ಅನುಷ್ಠಾನಕ್ಕೆ ಒತ್ತಡ ಹಾಕುತ್ತೇವೆ' ಎಂದರು. ಸ್ವರ್ಣವಲ್ಲಿ ಶ್ರೀಗಳು ಸಾನಿಧ್ಯ ವಹಿಸಿದ್ದರು.